# ಅಡಿಕೆ ಬೆಳೆಯಲ್ಲಿ ಹಿಂಗಾರು ಒಣಗುವ ರೋಗದ ನಿರ್ವಹಣೆ

ಅಡಿಕೆಯು ಭಾರತ ದೇಶದ ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಅಡಿಕೆ ಉತ್ಪನ್ನದಲ್ಲಿ ಭಾರತವು ಸ್ವಾವಲಂಬಿಯಾಗಿದ್ದು, ಪ್ರಸ್ತುತ ಕರ್ನಾಟಕದ 12 ಜಿಲ್ಲೆಗಳ (140 ತಾಲೂಕುಗಳಿಂದ) 2.79 ಲಕ್ಷ ಹೆಕ್ಟರ್ ಪ್ರದೇಶದಿಂದ 6.06 ಲಕ್ಷ ಟನ್ ಉತ್ಪಾದನೆ ಆಗುತ್ತಿದ್ದು, ಭಾರತದ ಒಟ್ಟು ಉತ್ಪಾದನೆಯ ಶೇ.65 ರಷ್ಟು ಅಡಿಕೆ ಬೆಳೆ ಕರ್ನಾಟಕದಲ್ಲಿ ಉತ್ಪಾದನೆಯಾಗುತ್ತಿದೆ. ನಂತರದ ಸ್ಥಾನವನ್ನು ಕ್ರಮವಾಗಿ ಕೇರಳ ಹಾಗೂ ಅಸ್ಸಾಂ ರಾಜ್ಯಗಳು ಪಡೆದುಕೊಂಡಿವೆ. ಇತ್ತೀಚಿನ ದಿನಗಳಲ್ಲಿ ಅಡಿಕೆಗೆ ರೋಗಗಳ ಬಾಧೆಯಿಂದ ಇಳುವರಿ ಕುಂಠಿತವಾಗುತ್ತಿದ್ದು ಅವುಗಳ ನಿರ್ವಹಣಾ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ರೋಗ ನಿರ್ವಹಣೆಯ ಕುರಿತು ಡಾ. ನಾಗರಾಜಪ್ಪ ಅಡಿವಪ್ಪರ್, ಮುಖ್ಯಸ್ಥರು, ಅಡಿಕೆ ಸಂಶೋಧನಾ ಕೇಂದ್ರ, ನವಿಲೆ, ಶಿವಮೊಗ್ಗದಿಂದ ಈ ಕೆಳಕಂಡ ಮಾಹಿತಿಯನ್ನು ನೀಡಲಾಗಿದೆ.

ಹಿಂಗಾರ ಒಣಗುವ ರೋಗವು ಅಡಿಕೆ ಬೆಳೆಯಲ್ಲಿ ಬರುವ ಪ್ರಮುಖ ರೋಗ. ಇದು ***ಕೊಲ್ಲೆಟೊಟ್ರೈಕಂ ಗ್ಲಿಯೋಸ್ಪೊರಾಯಿಡ್ಸ್*** ಎಂಬ ಶಿಲೀಂದ್ರದಿಂದ ಉಂಟಾಗುತ್ತದೆ. ಈ ರೋಗವನ್ನು ಕರ್ನಾಟಕದಲ್ಲಿ ಶೇ. 60 ಕ್ಕೂ ಹೆಚ್ಚು ಅಡಿಕೆ ತೋಟಗಳಲ್ಲಿ ಕಾಣಬಹುದು. ಈ ರೋಗವು ಸಾಂಪ್ರದಾಯಿಕವಾಗಿ ಅಡಿಕೆ ಬೆಳೆಯುವ ಮಲೆನಾಡು ಪ್ರದೇಶಗಳಿಗೆ ಹೋಲಿಸಿದಲ್ಲಿ ಮೈದಾನ ಪ್ರದೇಶಗಳಲ್ಲಿ ಹೆಚ್ಚಿನ ಹಾನಿಯನ್ನುಂಟು ಮಾಡುತ್ತದೆ. ಇದರಿಂದ ಅಡಿಕೆ ಕೃಷಿಕರಿಗೆ ಹೆಚ್ಚಿನ ಆರ್ಥಿಕ ನಷ್ಟವನ್ನುಂಟು ಮಾಡುತ್ತದೆ. ಅಡಿಕೆ ಬೆಳೆಯಲ್ಲಿ ಹಿಂಗಾರ ಒಡೆದು ಪರಾಗಸ್ಪರ್ಶವಾಗಿ ಕಾಯಿ ಕಚ್ಚುವ ಸಮಯದಲ್ಲಿ ಇದನ್ನು ಕಾಣಬಹುದು. ರೋಗವು ವರ್ಷಪೂರ್ತಿ ಇರುತ್ತದೆ, ಆದರೆ ರೋಗದ ಭಾದೆಯು ಜನವರಿ ಯಿಂದ ಏಪ್ರಿಲ್‌ವರೆಗೆ ಅಂದರೆ ಬೇಸಿಗೆಯಲ್ಲಿ ಹೆಚ್ಚಾಗುತ್ತದೆ.

**ರೋಗದ ಲಕ್ಷಣಗಳು**

ಹಿಂಗಾರದಲ್ಲಿ ಗಂಡು ಹೂಗಳ ಎಸಳುಗಳ ಹಳದಿಯಾಗುವಿಕೆ ಈ ರೋಗದ ಮೊದಲ ಚಿಹ್ನೆ. ಹಳದಿ ಬಣ್ಣ ಎಸಳುಗಳ ತುದಿಯಿಂದ ಪ್ರಾರಂಭವಾಗಿ ಹಿಮ್ಮುಖವಾಗಿ ಬುಡಭಾಗಕ್ಕೆ ಮುಂದುವರೆಯುತ್ತದೆ, ನಂತರ ಎಸಳುಗಳು ಕಂದು ಬಣ್ಣಕ್ಕೆ ತಿರುಗಿ ಒಣಗತೊಡಗುತ್ತವೆ. ಈ ಸ್ಥಿತಿಯನ್ನು ಡೈಬ್ಯಾಕ್ ಎನ್ನುವರು. ಎಸಳುಗಳ ಹಳದಿಯಾಗುವಿಕೆ ಮತ್ತು ಕಂದಾಗುವಿಕೆ ಮುಂದುವರೆದಂತೆ ಹೆಣ್ಣು ಹೂವುಗಳು ಉದುರತೊಡಗುತ್ತದೆ. ನಂತರ ರೋಗ ಇಡೀ ಹಿಂಗಾರಕ್ಕೆ ಹರಡಿ ಅಂತಹ ಹಿಂಗಾರಗಳು ಸಾಯುತ್ತವೆ. ರೋಗ ಪೀಡಿತ ಹಿಂಗಾರಗಳಲ್ಲಿ ಪರಾಗಸ್ಪರ್ಶ ಕ್ರಿಯೆ ಕಡಿಮೆಯಾಗುವುದರಿಂದ ಎಳೆ ಕಾಯಿಗಳು ಉದುರುತ್ತವೆ. ಇಂತಹ ರೋಗದ ಚಿಹ್ನೆಗಳು ಎಲ್ಲಾ ತೋಟಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

**ರೋಗ ಹರಡಲು ಸೂಕ್ತ ವಾತಾವರಣ**

ಮೋಡ ಕವಿದ ವಾತಾವರಣ, ಉಷ್ಣಾಂಶ ($24–32^0$ ಸೆಂ.) ಮತ್ತು ಆದ್ರತೆ ($80–90^0$) ಈ ರೋಗ ಹರಡುವುದಕ್ಕೆ ಪೂರಕವಾದ ಅಂಶಗಳು. ಅಲ್ಲದೆ, ಮಳೆಗಾಲದಲ್ಲಿಯೂ ಇದರ ಬಾಧೆ ಮುಂದುವರೆಯುವುದರಿಂದ ಅಡಿಕೆ ಬೆಳೆಯುವ ಕೃಷಿಕರು ಈ ರೋಗ ಕಂಡು ಬಂದಲ್ಲಿ ಈ ಕೆಳಗೆ ಸೂಚಿಸಿದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

**ನಿರ್ವಹಣೆ:**

- ರೋಗಕ್ಕೆ ತುತ್ತಾದ ಒಣಗಿದ ಹಿಂಗಾರಗಳನ್ನು ತೆಗೆದು ನಾಶಪಡಿಸಬೇಕು ಇದರಿಂದ ರೋಗ ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬಹುದು.
- ಪ್ರತಿ ಲೀಟರ್ ನೀರಿನಲ್ಲಿ 2.5ಗ್ರಾಂ. ಮ್ಯಾಂಕೋಜ಼ೆಬ್‌ನ್ನು (ಡೈಥೇನ್ ಎಂ–45 ಅಥವಾ ಇಂಡೋಫಿಲ್ ಎಂ–45) ಅಥವಾ 2 ಗ್ರಾಂ. ಸಾಫ್ (ಮ್ಯಾಂಕೋಜ಼ೆಬ್63%+ಕಾರ್ಬೆನ್‌ಡೈಜೀಮ್12%) ಅನ್ನು ಗೊಂಚಲು ಅರಳುವ ಸಮಯದಲ್ಲಿ ಹಾಗೂ 20–25 ದಿನಗಳ ಅಂತರದಲ್ಲಿ ಮತ್ತೊಂದು ಸಾರಿ ಸಿಂಪಡಿಸಬೇಕು. ಜನವರಿ–ಫೆಬ್ರವರಿ ತಿಂಗಳಿನಲ್ಲಿ ಸಿಂಪರಣೆ ಮಾಡುವುದು ಉತ್ತಮ.



ಹಿಂಗಾರು ಒಣಗುವ ರೋಗ



ಎಸಳುಗಳು ಹಿಮ್ಮುಖವಾಗಿ ಒಣಗುವುದು